ಎಂದು ಕಾಮನನ್ನು ಶಪಿಸಿದ. ಇದನ್ನು ಕೇಳಿದ ಕಾಮನ ಮಡದಿ ಮೂರ್ಛಿತಳಾಗಿ, ನಂತರ ಎಚ್ಚರವಾಗಿ ವಿರಹದಿಂದ ಪರಿತಪಿಸಿದಳು. ಹೀಗೆ ಕಥೆಯನ್ನು ನನೆಯಂಬನಿಗೆ ಹೇಳಿದ ಅಚ್ಚರಸಿಯು ಕಾಮನಾಗಿದ್ದ ನೀನು ಶಿವನ ಶಾಪದಿಂದ ನನೆಯಂಬನಾದೆ. ಈ ಕಥೆಯನ್ನು ಕೇಳಿದಾಗ ನಿನಗೆ ಶಾಪ ವಿಮೋಚನೆಯಾಗುತ್ತದೆಯೆಂಬುದು ಶಾಪಕ್ಕೆ ಪರಿಹಾರ.

ಈಗ ನೀನು ಈ ಕಥೆಯನ್ನು ಕೇಳಿದ್ದರಿಂದ ನಿನ್ನ ಶಾಪ ಹಿಂಗಿತು. ಈಗ ನೀನು ಪುನಃ ಕಾಮನಾದೆ ಎಂದು ಹೇಳಿ ಹಿಂದಿರುಗಿದಳು. ಯುದ್ಧದಲ್ಲಿ ಗೆದ್ದ ನನೆಯಂಬನನ್ನು – ಈಗಿನ ಕಾಮನನ್ನು ವಸಂತನು ನಗರಕ್ಕೆ ಸ್ವಾಗತಿಸಿದ. ಕಾಮ ಮತ್ತು ಇಚ್ಛೆಗಾರ್ತಿ ತಮ್ಮ ನಗರದ ಅರಮನೆಯಲ್ಲಿ ಸಿಂಹಾಸನಾರೂಢರಾಗಿ ಯುವತಿಯರನ್ನು ಹರಸಿದರು ಇದು ಈ ಕಾವ್ಯದ ಸಂಕ್ಷಿಪ್ತ ಕಥೆ.

ಕಾವ್ಯದ ತುಂಬೆಲ್ಲಾ, ನಗರ ವರ್ಣನೆ, ವನ ವರ್ಣನೆ, ವಸಂತ ವರ್ಣನೆ, ಹೂವುಗಳು, ತುಂಬಿಗಳು, ಮಾವಿನ ಮರ, ಕೋಗಿಲೆ, ಗಿಳಿಗಳ ವರ್ಣನೆ, ಯುವತಿಯರ ವರ್ಣನೆ ಮುಂತಾದವುಗಳು ಚರ್ವಿತ ಚರ್ವಣವಾಗಿದ್ದರೂ ಅಲ್ಲಲ್ಲಿ ಸ್ವಾರಸ್ಯವಾಗಿರುವುದೂ ಉಂಟು. ಕಥೆಗಿಂತಲೂ ಈ ವರ್ಣನೆಗಳೇ ಪ್ರಧಾನವಾಗಿ ಕಾಣುತ್ತವೆ.

ಇಡೀ ಕಾವ್ಯವು ಅಚ್ಚಗನ್ನಡದಲ್ಲಿ, ತದ್ಭವ ಶಬ್ದಗಳಲ್ಲಿ, ಸಂಸ್ಕೃತ ಶಬ್ದಗಳ ವಿಶಿಷ್ಟವಾದ ಕನ್ನಡ ಅನುವಾದದಲ್ಲಿ ಕನ್ನಡಮಯವಾಗಿರುವುದಂತೂ ನಿಜ. ಇಡೀ ಕಾವ್ಯದಲ್ಲಿ ಒಂದೇ ಒಂದು ಮಹಾಪ್ರಾಣ ಶಬ್ದವೂ ಇಲ್ಲದಿರುವುದು ಶುದ್ಧ ಕನ್ನಡ ಭಾಷೆಯಲ್ಲಿ ಮಹಾಪ್ರಾಣಗಳೇ ಇಲ್ಲವೆನ್ನುವುದನ್ನು ಸಾರಿಹೇಳುತ್ತವೆ.

ಇಷ್ಟು ಸೊಗಸಾಗಿ ಅಚ್ಚಗನ್ನಡದಲ್ಲಿ ಕಾವ್ಯವನ್ನು ರಚಿಸಿದರೂ, ಅದು ಜನಪ್ರಿಯವಾಗಲಿಲ್ಲ. ಅದಕ್ಕೆ ಮುಖ್ಯ ಕಾರಣ ಕಥೆಯ ಜಾಳುಗುಣ. ಆಂಡಯ್ಯನ ದೃಷ್ಟಿಯೆಲ್ಲವೂ ಸೃಷ್ಟಿಯ ವರ್ಣನೆ ಮತ್ತು ಅಚ್ಚಗನ್ನಡ ಭಾಷೆಯ ಪ್ರಯೋಗದ ಕಡೆಗಿತ್ತೇ ಹೊರತು, ಕಥಾ ಸಂವಿಧಾನದ ಬಿಗಿಯನ್ನು ಕಾಯುವುದರಲ್ಲಿರಲಿಲ್ಲ.

ಸಂಸ್ಕೃತವೇ ಇಲ್ಲದೆ ಕನ್ನಡದಲ್ಲಿ ಕಾವ್ಯ ರಚಿಸುತ್ತೇನೆಂದು ಪ್ರತಿಜ್ಞೆ ಮಾಡಿ ಅದರಲ್ಲಿ ಸಫಲನಾದ ಕವಿ, ತನ್ನ ಕಾವ್ಯವನ್ನು ಸಂಸ್ಕೃತ ಬಲ್ಲವರು 'ಮದನ ವಿಜಯ' ಎಂಬ ಹೆಸರನ್ನು ಕೊಟ್ಟಿರುವರೆಂದು ಹೇಳಿ ಸಂಸ್ಕೃತ ಶಬ್ದವನ್ನು ಬಳಸಿದ್ದಾನೆ. ಈ ಕಾವ್ಯಕ್ಕೆ 'ಸೊಬಗಿನ ಸುಗ್ಗಿ', 'ಕಾವನ ಗೆಲ್ಲ' ಎಂಬ ಹೆಸರುಗಳೂ ಇವೆ.


## ಎ.ವಿ. ಪ್ರಸನ್ನ

ಕರ್ನಾಟಕ ಸರ್ಕಾರದ ಕೆ.ಎ.ಎಸ್. ಉನ್ನತ ಅಧಿಕಾರಿಯಾಗಿ ನಿವೃತ್ತರಾದ ಪ್ರಸನ್ನ ಕೆಲ ಕಾಲ ಕನ್ನಡ ಅಧ್ಯಾಪಕರಾಗಿದ್ದರು. ಕನ್ನಡ ಸಾಹಿತ್ಯದ ಮುಖ್ಯವಾಗಿ ಹಳಗನ್ನಡ, ನಡುಗನ್ನಡ ಸಾಹಿತ್ಯದ ಬಹುಶ್ರುತ ವಿದ್ವಾಂಸರು. ಕುಮಾರವ್ಯಾಸ ಮತ್ತು ತಿಮ್ಮಣ್ಣ ಕವಿಗಳ ಭಾರತಗಳನ್ನು 'ಕನ್ನಡ ಭಾರತ'ವೆಂಬ ಹೆಸರಿನಲ್ಲಿ ಪರಿಷ್ಕರಿಸಿ ಸಂಪಾದಿಸಿದ್ದಾರೆ. 'ಕುಮಾರವ್ಯಾಸನ ಕಾವ್ಯ ಚಿತ್ರಗಳ ಒಂದು ಅಧ್ಯಯನ' ಮಹಾಪ್ರಬಂಧಕ್ಕೆ ಹಂಪಿ ವಿ.ವಿ.ಯಿಂದ ಡಿ.ಲಿಟ್. ಪದವಿ ಪಡೆದಿದ್ದಾರೆ ಮತ್ತು ಅದನ್ನು ಜ್ಯೋತಿ ಪ್ರತಿಷ್ಠಾನ ಪ್ರಕಟಿಸಿದೆ. ಕಳೆದ 12 ವರ್ಷಗಳಿಂದ ದೂರದರ್ಶನದ 'ಚಂದನ' ವಾಹಿನಿಯಲ್ಲಿ 'ಗಮಕಸೌರಭ' ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ. ಪತ್ನಿ ನಿರ್ಮಲಾ ಅವರೊಂದಿಗೆ ಪ್ರಸನ್ನ ಅವರು ಮಾಡಿದ ಗಮಕ ವ್ಯಾಖ್ಯಾನಗಳು ಜನಪ್ರಿಯತೆ ಮತ್ತು ವಿದ್ವತ್ ಮನ್ನಣೆಗಳನ್ನು ಪಡೆದಿವೆ.